"ಮುಖಗವಸು ಧರಿಸಿ, ಸ್ಯಾನಿಟೈಸರ್ ಬಳಸಿ" "ಕಡ್ಡಾಯವಾಗಿ ಸಾಮಾಜಿಕ ಅಂತರ ಕಾಪಾಡಿ"

ಕರ್ನಾಟಕ ಸರ್ಕಾರ

# ತಹಶೀಲ್ದಾರ್‌ರವರ ಕಾರ್ಯಾಲಯ, ಹೊಸದುರ್ಗ ತಾಲ್ಲೂಕು, ಹೊಸದುರ್ಗ

ನಂ.ಎಂ.ಎ.ಜಿ.ಸಿ.ಆರ್38/2021-22 ದಿನಾಂಕ:01/12/2021

ಗೆ.
ಮಾನ್ಯ ಜಿಲ್ಲಾಧಿಕಾರಿಗಳು
ಚಿತ್ರದುರ್ಗ ಜಿಲ್ಲೆ
ಚಿತ್ರದುರ್ಗ

ಮಾನ್ಯರೇ

ವಿಷಯ: ಹೊಸದುರ್ಗ ತಾಲ್ಲೂಕು ವ್ಯಾಪ್ತಿಯಲ್ಲಿ ಮತಾಂತರವಾಗುತ್ತಿರುವ ಕುರಿತು ವರದಿಯನ್ನು ಸಲ್ಲಿಸುತ್ತಿರುವ ಬಗ್ಗೆ.

ಉಲ್ಲೇಖ: 1.ಮಾನ್ಯ ಜಿಲ್ಲಾಧಿಕಾರಿಗಳು ಚಿತ್ರದುರ್ಗ ರವರ ಪತ್ರ ನಂ.ಎಂ.ಎ.ಜಿ.ಸಿ.ಆರ್51/21-22 ದಿನಾಂಕ:8/10/2021.
2.ರಾಜಸ್ವನಿರೀಕ್ಷಕರು ಕಸಬಾ. ಮಾಡದಕೆರೆ ಮತ್ತು ಶ್ರೀರಾಂಪುರ ಇವರ ವರದಿ ದಿನಾಂಕ:12/10/2021.
3.ಪತ್ರಕರ್ತರು ಮತ್ತು ಮಾದ್ಯಮದವರ ದೂರವಾಣಿ ದಿ:29/11/2021 ಮತ್ತು 30/11/2021

*****

ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ ಇತ್ತೀಚಿನ ದಿನಗಳಲ್ಲಿ ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡ ಹಾಗೂ ಹಿಂದುಳಿದ ವರ್ಗಗಳ ಬಡ ಕುಟುಂಬಕ್ಕೆ ಸೇರಿದ ಕುಟುಂಬಗಳನ್ನು ಗುರುತಿಸಿ ಹಣದ ಆಸೆ ತೋರಿಸಿ ಹೆಚ್ಚಿನ ಸಂಖ್ಯೆಯಲ್ಲಿ ಮತಾತಂತರ ಮಾಡುತ್ತಿರುವ ಕುರಿತು ಸಾಮಾಜಿಕ ಜಾಲತಾಣದಲ್ಲಿ ವರದಿಯಾಗುತ್ತಿದ್ದು, ಈ ಬಗ್ಗೆ ಉಲ್ಲೇಖ (1)ರ ಮಾನ್ಯ ಜಿಲ್ಲಾಧಿಕಾರಿಗಳವರ ಪತ್ರದ ನಿರ್ದೇಶನದಂತೆ ಉಲ್ಲೇಖ(2)ರಲ್ಲಿ ರಾಜಸ್ವನಿರೀಕ್ಷಕರು ಪರಿಶೀಲಿಸಲಾಗಿ, ಹೊಸದುರ್ಗ ಪಟ್ಟಣದಲ್ಲಿರುವ ಚರ್ಚಗಳ ಮಾಹಿತಿ ಈ ಕೆಳಕಂಡಂತಿದೆ.

1.ಎಪ್ರಾನ್ ಆರಾಧನ ಮಂದಿರ ವಿದ್ಯಾನಗರ -30ಜನ
2.ಸಂತ ಲೂಕನ ದೇವಾಲಯ ಎನ್.ಇ.ಎಸ್.ಬಡಾವಣೆ -80ಜನ
3.ಕಲ್ವಾರಿ ಬೇತೇಲ್ ಚರ್ಚ ಶಾಂತಿನಗರ-120ಜನ
4.ಸೈಂಟ್ ಆಂಟನೀಸ್ ಚರ್ಚ ಹಿರಿಯೂರು ರಸ್ತೆ-49ಜನ
5.ಪಾಲೋಮ್ ಸಂಪೂರ್ಣ ಸುವರ್ಣ ಚರ್ಚ ಕಪ್ಪಗೆರೆ ರಸ್ತೆ-60ಜನ

ಈ ಚರ್ಚಗಳಲ್ಲಿ ಪ್ರತಿ ಶುಕ್ರವಾರ ಮತ್ತು ಭಾನುವಾರ ಜನರು ಪ್ರಾರ್ಥನೆ ಸಲ್ಲಿಸುತ್ತಿದ್ದು, ಚರ್ಚಗಳಿಗೆ ಜನರು ಸ್ವ ಇಚ್ಚೆಯಿಂದ ಬಂದು ಪ್ರಾರ್ಥನೆ ಸಲ್ಲಿಸುತ್ತಿರುತ್ತಾರೆ, ಯಾವುದೇ ಆಮಿಷ ಬಲವಂತವಾಗಿ ಮತಾಂತರ ಮಾಡುತ್ತಿರುವುದಿಲ್ಲ. ಮತ್ತು ಸರ್ಕಾರದ ಯಾವುದೇ ಸವಲತ್ತು ಪಡೆದಿರುವುದಿಲ್ಲ. ತಿಳಿಸಿರುತ್ತಾರೆ

ಹೊಸದುರ್ಗ ತಾಲ್ಲೂಕು ಶ್ರೀರಾಂಪುರ ಹೋಬಳಿ ಮಾರುತಿನಗರ(ಕಾಡುಸಿದ್ದರಹಟ್ಟಿ) ಗ್ರಾಮಕ್ಕೆ ದಿನಾಂಕ:05/10/2021ರಂದು ಪೋಲೀಸ್ ನಿರೀಕ್ಷರು ಹೊಸದುರ್ಗ ಹಾಗೂ ರಾಜಸ್ವನಿರೀಕ್ಷಕರು ಶ್ರೀರಾಂಪುರ ಮತ್ತು ಗ್ರಾಮಲೆಕ್ಕಾಧಿಕಾರಿ ಇವರುಗಳೊಂದಿಗೆ ಗ್ರಾಮಕ್ಕೆ ಭೇಟಿ ನೀಡಿ ಪರಿಶೀಲಿಸಲಾಗಿ ಮಾರುತಿನಗರ (ಕಾಡುಸಿದ್ದರಹಟ್ಟಿ) ಗ್ರಾಮದಲ್ಲಿ ಸುಡುಗಾಡು ಸಿದ್ದರ ಜಾತಿಗೆ ಸೇರಿದ್ದ ಸುಮಾರು 35ಕುಟುಂಬ ಮತಾಂತರ ಹೊಂದಿರುವುದಾಗಿ ಗ್ರಾಮಸ್ಥರು ತಿಳಿಸಿದ್ದು ಗ್ರಾಮದಲ್ಲಿ ವಾಸವಿದ್ದ 5 ಮನೆಗಳಿಗೆ ಭೇಟಿ ನೀಡಿ ವಿಚಾರಣೆ ಮಾಡಲಾಗಿ ಯಾವುದೇ ಒತ್ತಡ, ಆಮೀಷ, ಬಲವಂತದಿಂದ ಮತಾಂತರ ಹೊಂದಿರುವುದಿಲ್ಲ

ಸ್ವ-ಹಿಚ್ಚೆಯಿಂದ ಮತಾಂತರ ಹೊಂದಿರುವುದಾಗಿ ತಿಳಿಸಿರುತ್ತಾರೆ. ಬೇರೆ ಕಡೆಯಿಂದ ಬಂದು ಒಂದು ಮನೆಯಲ್ಲಿ ಪಾದ್ರಿಗಳು ಗ್ರಾಮದ ಕೆಲವರನ್ನು ಸೇರಿಸಿ (ಕ್ರಿಶ್ಚಿಯನ್ ಧರ್ಮಕ್ಕೆ ಸೇರಬಯಸುವ) ಜನರನ್ನು ಸೇರಿಸಿಕೊಂಡು ಪ್ರಾರ್ಥನೆ ಮಾಡುತ್ತಿರುವುದು ಕಂಡು ಬಂದಿರುತ್ತದೆ. ಈ ಬಗ್ಗೆ ಹಲವರು ಆಸೆ-ಆಮೀಷಗಳಿಗೆ ಒಳಗಾಗಿ ಕ್ರಿಶ್ಚಿಯನ್ ಧರ್ಮಕ್ಕೆ ಸೇರಿರುತ್ತಾರೆ. ಈ ಬಗ್ಗೆ ಮತಾಂತರ ಹೊಂದದಂತೆ ತಿಳುವಳಿಕೆ ನೀಡಲಾಗಿ ಗ್ರಾಮದ 3 ಕುಟುಂಬಗಳ ಪೈಕಿ 08ಜನರು ಕ್ರಿಶ್ಚಿಯನ್ ಜಾತಿಯ ಧರ್ಮವನ್ನು ತ್ಯಜಿಸಿ ಮಾತೃ ಧರ್ಮಕ್ಕೆ ವಾಪಾಸ್ಸು ಬಂದಿರುವುದಾಗಿ ತಿಳಿಸಿರುತ್ತಾರೆ.

ಹೊಸದುರ್ಗ ತಾಲ್ಲೂಕು ಮಾಡದಕೆರೆ ಹೋಬಳಿ ದೇವಪುರ ಬೋವಿಹಟ್ಟಿ ಗ್ರಾಮದಲ್ಲಿ 22 ಜನ ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರವಾಗಿದ್ದು, ಕ್ರಿಶ್ಚಿಯನ್ ಧರ್ಮಕ್ಕೆ ಸಂಬಂದಿಸಿದ ಯಾವುದೇ ಸರ್ಕಾರದ ಸವಲತ್ತುಗಳು ಪಡೆದಿರುವುದಿಲ್ಲ. ಕ್ರಿಶ್ಚಿಯನ್ ಧರ್ಮಕ್ಕೆ ಸೇರಿದವರು ತಿಳಿಸಿರುತ್ತಾರೆ. ಉಲ್ಲೇಖ(3)ರಂತೆ ದಿನಾಂಕ;29/11/2021 ಮತ್ತು 30/11/2021ರಂದು ಪತ್ರಕರ್ತರು, ಮಾದ್ಯಮದವರು ದೂರವಾಣಿ ಕರೆ ಮಾಡಿ ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರವಾದ ಬಗ್ಗೆ ಮನೆ ಮನೆ ಸಮೀಕ್ಷೆ ಮಾಡಲು ಆದೇಶ ಮಾಡುವುದಾಗಿ ಕೇಳುತ್ತಿರುತ್ತಾರೆ, ಈ ಬಗ್ಗೆ ಯಾವುದೇ ಆದೇಶ ಮಾಡಿರುವುದಿಲ್ಲ. ಪೋಲೀಸ್ ನಿರೀಕ್ಷಕರು ನಾನು ಗ್ರಾಮಕ್ಕೆ ಭೇಟಿ ನೀಡಿದ ಸಮಯದಲ್ಲಿ ವಿಚಾರಣೆ ಸಮಯದಲ್ಲಿ ತೆಗೆದ ಪೋಟೋ ಮತ್ತು ವಿಡಿಯೋ ಲಗತ್ತಿಸಿದೆ. ಮತಾಂತರ ಹೊಂದಿದವರ ಮನೆಯಲ್ಲಿ ಯಾವುದೇ ಹಿಂದು ದೇವರುಗಳ ಪೋಟೊ ಇರುವುದಿಲ್ಲ ಕ್ರಿಶ್ಚಿಯನ್ ಧರ್ಮದ ಪೋಟೋಗಳು ಹಾಗೂ ಕ್ಯಾಲೆಂಡರ್‌ರಗಳನ್ನು ಹಾಕಿರುತ್ತಾರೆ. ಆದರೆ ಅವರು ಯಾವುದೇ ಅಮಿಷಕ್ಕೆ ಒಳಗಾಗಿರುವುದಿಲ್ಲವೆಂದು ತಿಳಿಸಿರುತ್ತಾರೆ. ವಾಸ್ತವಾಂಶದ ವರದಿ ಸಲ್ಲಿಸುತ್ತೇನೆ.

ತಮ್ಮ ನಂಬುಗೆಯ

ತಹಶೀಲ್ದಾರ್
ಹೊಸದುರ್ಗ ತಾಲ್ಲೂಕು